# ಎಸ್.ಎಸ್.ಎಲ್.ಸಿ ಪ್ರಥಮ ಭಾಷೆ ಕನ್ನಡ

## ಉತ್ತಮ ಅಂಕಗಳನ್ನು ಗಳಿಸಲು ವಿದ್ಯಾರ್ಥಿಗಳ ಅಭ್ಯಾಸಕ್ಕಾಗಿ

## 10 ಮಾದರಿ ಪ್ರಶ್ನೆ ಪತ್ರಿಕೆಗಳು


**ಕೆ ಮುನಿಯಪ್ಪ**

ಎಂ.ಎ, ಎಂ.ಇಡಿ, ಎಂ.ಫಿಲ್

ಕನ್ನಡ ಸಹ ಶಿಕ್ಷಕರು

ಧರ್ಮಸಾಗರ ಪ್ರೌಢಶಾಲೆ

ದೊಮ್ಮಸಂದ್ರ, ಆನೇಕಲ್ ತಾಲ್ಲೂಕು

ಬೆಂಗಳೂರು-562125

ಫೋನ್ ನಂ-9900693327

# ಮಾದರಿ ಪ್ರಶ್ನೆಪತ್ರಿಕೆ – 1

**ಅಂಕಗಳು: 100** **ವಿಷಯ : ಕನ್ನಡ ತರಗತಿ: 10** **ಸಮಯ : 3ಗಂಟೆ**

**ಅ) ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. 6*1=6**

1. ಟ ವರ್ಗದ ಅನುನಾಸಿಕ ಅಕ್ಷರ
   1. ಞ 2. ಙ 3. ಮ 4. ನ
2. ಕುರ್ಚಿ ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ.
   1. ಹಿಂದೂಸ್ತಾನಿ 2. ಪೋರ್ಚುಗೀಸ್ 3. ಅರಬ್ಬೀ 4. ಉರ್ದು
3. 'ಹಿಂದಲೆ' ಇದು ಈ ಸಮಾಸಕ್ಕೆ ಉದಾಹರಣೆ.
   1. ಕರ್ಮಧಾರೆಯ 2. ದ್ವಂದ್ವ 3ಅಂಶಿ 4. ಗಮಕ
4. ಪಾರಿಭಾಷಿಕ ಪದಗಳನ್ನು ಬಳಸುವಾಗ,ಅನ್ಯಭಾಷೆಯ ಪದಗಳನ್ನು ಬಳಸುವಾಗ ಈ ಚಿಹ್ನೆಯನ್ನು ಬಳಸಲಾಗುತ್ತದೆ.
   1.ಅಲ್ಪವಿರಾಮ 2. ವಾಕ್ಯವೇಷ್ಠನ 3.ಉದ್ಧರಣ 4. ಆವರಣ
5. ಮಂಡ್ಯವು ಮಲೇರಿಯಾದ ತವರೂರಾಗಿತ್ತು.
   1. ಸಾಮಾನ್ಯವಾಕ್ಯ 2. ಮಿಶ್ರ 3. ಅಸಾಮಾನ್ಯ 4. ಸಂಯೋಜಿತ
6. ಸಂಪ್ರದಾನ ಈ ವಿಭಕ್ತಿಯ ಕಾರಕಾರ್ಥ.
   1.ಪ್ರಥಮ 2. ಚತುರ್ಥಿ 3. ಸಪ್ತಮಿ 4. ದ್ವಿತೀಯ

**ಆ) ಕೆಳಗಿನ ಪ್ರಶ್ನೆಗಳಿಗೆ ಮೊದಲೆರೆಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ. 4*1=4**

7. ಮನೆಮಠ ; ಜೋಡುನುಡಿ :: ಕಟ್ಟಕಡೆಗೆ ; ___________
8. ಅರ್ಕ; ಎಕ್ಕ:: ಕುಠಾರ ; _____________
9. ಎಲರ್ ; ಗಾಳಿ :: ಬನ್ನ ; ____________
10. ಹೊಲ ; ರೂಢನಾಮ : ಶಿಕ್ಷಕ; ____________

**ಇ) ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 7*1=7**

11. ಭೂಮಿಜಾತೆ ಯಾರು ?
12. ನಾಲ್ವಡಿ ಕೃಷ್ಣರಾಜ ಒಡೆಯರು ಯಾವುದಕ್ಕೆ ಕಂಕಣ ಬದ್ಧರಾಗಿದ್ದರು?
13. ಮಸಿ ಕಾಣಿಕೆ ಎಂದರೇನು?
14. ದುರ್ಯೋಧನ ಯಾರಿಬ್ಬರನ್ನು ಕೊಂದ ಬಳಿಕ ಸಂಧಿ ಮಾಡಿಕೊಳ್ಳುವುದಾಗಿ ಹೇಳುತ್ತಾನೆ?
15. ಹಲಗಲಿಯ ಗುರುತು ಉಳಿಯದಾದುದು ಹೇಗೆ?
16. ಮೃಗದ ಬಗ್ಗೆ ಸುಂದರಿಯ ಮನ ಕರಗಿತ್ತಿತ್ತು ಏಕೆ ?
17. ಸುಕುಮಾರ ಸ್ವಾಮಿಗೆ ಯಾವ ಪಟ್ಟವನ್ನು ಕಟ್ಟಲಾಯಿತು?

**ಈ) ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 10*2=20**

18. ಟೊಪ್ಪಿಗೆಯ ವಿಶೇಷತೆಯನ್ನು ವಿ.ಕೃ.ಗೋಕಾಕ್ ರವರು ಹೇಗೆ ವಿಶ್ಲೇಸಿದ್ದಾರೆ?
19. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣವೇನು?
20. ಹಣಕಾಸು ನೀತಿಯಲ್ಲಿ ವಿಶ್ವೇಶ್ವರಯ್ಯ ಅವರು ಮಾಡಿದ ಮಾರ್ಪಾಡುಗಳೇನು?
21. ವೃಷಭಾಂಕನು ಸುಕುಮಾರ ಸ್ವಾಮಿಗೆ ವ್ಯಾಧಿಯಿದೆ ಎಂದುಕೊಳ್ಳಲು ಕಾರಣವೇನು?

22. ಪಾರ್ಥ ಭೀಮರ ಬಗ್ಗೆ ದುರ್ಯೋಧನನ ಅಭಿಪ್ರಾಯವೇನು?
23. ಪರಶುರಾಮರು ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಡಲು ಕಾರಣವೇನು?
24. ವಿವೇಕಾನಂದರು ಕೋಮುವಾದದ ಕಟ್ಟಾ ವಿರೋಧಿಯಾಗಿದ್ದರು ಏಕೆ?
25 ಉತ್ತರಾಣಿ ಗಿಡದ ವಿಶೇಷತೆ ಒಗಟಿನಲ್ಲಿ ಹೇಗೆ ವ್ಯಕ್ತಗೊಂಡಿದೆ?
26. ವಸಂತ ಮುಖ ತೋರಲಿಲ್ಲ ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತಗೊಂಡಿದೆ?
27. ಭಗತ್ ಸಿಂಗ್ ತನ್ನ ಸಹೋದರಿಗೆ 'ತ್ಯಾಗದ ಪ್ರತೀಕ ಆ ಮಣ್ಣು' ಎಂದನು. ಏಕೆ?

**ಉ) ಕೆಳಗಿನ ಕವಿ/ಸಾಹಿತಿಗಳ ಕಾಲ, ಸ್ಥಳ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2*3=6**

28. ಪಂಪ.
29. ವಿ. ಕೃ. ಗೋಕಾಕ್.

**ಊ). ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1*3=3**

30. ಎತ್ತಣ ತುರಗಮಿದು ಪೊಕ್ಕು ಪೂದೋಟಮಂ
ತೊತ್ತಳದುಳಿದುದು ವಾಲ್ಮೀಕಿ ಮುನಿನಾಥನೇ
ಪೊತ್ತು ಮಾರ್ಕೈವುದೆಂದೆನಗೆ ನೇಮಿಸಿ ಪೋದನಬ್ಧಿಪಂ ಕರೆಸಲಾಗಿ

**ಋ) ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿರಿ.1*3=3**

31. ಆತನು ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದು ಉತ್ತೀರ್ಣನಾದನು, ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದುಲೆಕ್ಕವೇ?

**ಎ) ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1*3=3**

32. ಮನಸಿದ್ದರೆ ಮಾರ್ಗ

ಅಥವಾ

ಕೈ ಕೆಸರಾದರೆ ಬಾಯಿ ಮೊಸರು

**ಏ) ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6*3=18**

33. "ದಯವಿಟ್ಟು ಬಾಗಿಲು ತೆಗೆಯಿರಿ ; ನಾನು ಗಾಯಗೊಂಡಿದ್ದೇನೆ"
34. " ರೂಪಿನಮತೆ ಮತು ಕೂಡ ಎನಿತುದಾರವಾಗಿದೆ"
35. "ಯಾವ ಜೀವಿಯು ತನ್ನಷ್ಟಕ್ಕೆ ತಾನಿಲ್ಲ"
36. "ಅರಸುಗಳ ವಾಜಿಯಂ ಬಿಡು"
37. "ಮಂಗಳ ಲೋಕದ ಅಂಗಳಕ್ಕೇರಿ"
38. ಜೀವ ಸತ್ತು ಹೋಗುವುದು ಗೊತ್ತಾ "

**ಐ) ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1*4=4**

39. ಕೊರಳ ಸೆರೆ ಹಿಗ್ಗಿದವು________ ಮಾರಿಗೌತಣವಾಯ್ತು

________________ ____________________

____________________ ಅಥವಾ ____________________

____________________ ________________________

______________ಚಿಂತಿಸಿದ ______________ರಾಜೀವ ಸಖನಾಣೆ

**ಒ) ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ.** **1*4=4**

40. ಹೊಸ ಹೂವಿನ ಕಂಪು ಹಸುರು
ಎಲರಿನ ತಂಪು ಹಸುರು
ಹಕ್ಕಿಯ ಕೊರಲಿಂಪು ಹಸುರು
ಹಸುರು ಹಸುರಿಳೆಯುಸಿರು

**ಓ) ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2*4=8**

41. ವೃಕ್ಷ ಸಾಕ್ಷಿ ಪಾಠದಲ್ಲಿ ನೀವು ಮೆಚ್ಚುವ ಪಾತ್ರ ಯಾವುದು ? ಏಕೆ ವಿವರಿಸಿ.

ಅಥವಾ

ದುಷ್ಟಬುದ್ಧಿಯ ತಂತ್ರ ಅವನಿಗೆ ತಿರುಗುಬಾಣವಾಗುವ ಬಗೆಯನ್ನು ವಿವರಿಸಿ.

42. ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂಬುದು ಕವಿ ಜಿ.ಎಸ್.ಎಸ್ ರವರ ಆಶಯವಾಗಿದೆ ?

ಅಥವಾ

ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಜಿ.ಎಸ್.ಎಸ್ ರವರ ಅಭಿಪ್ರಾಯ ವಾಗಿದೆ ?

**ಔ) ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಿರಿ.** **2+2=4**

43. ಜೀವನವನ್ನು ಕುರಿತು ನಮ್ಮ ದೃಷ್ಟಿಕೋನ ಬದಲಿಸಿದಾಗ ನಮ್ಮ ಜೀವನವೇ ಬದಲಾಗುವುದು ಎಂದು ಅಮೇರಿಕಾದ ಪ್ರಸಿದ್ದ ಮನೋವಿಜ್ಞಾನಿ ಹೇಳಿದ್ದಾರೆ. ಆದರೆ ದೃಷ್ಟಿಕೋನ ಹೇಗೆ ಬದಲಾದೀತು? ನಮ್ಮ ಸುತ್ತಮುತ್ತಲಿನ ವಸ್ತುಗಳ ವ್ಯಕ್ತಿಗಳ ನೈಜ ಸ್ವಭಾವವನ್ನು ತಿಳಿದಾಗ, ನಮ್ಮ ವ್ಯಕ್ತಿತ್ವದ ಮೂಲ ಸ್ವಭಾವದ ಪರಿಚಯವಾದಾಗ, ನಮ್ಮಲಿ ಇತರೆ ಸಾಮಾನ್ಯರಲ್ಲಿ ವಿಶೇಷ ಬದಲಾವಣೆ ಸಾಧ್ಯ. ವಿಜ್ಞಾನವು ನಮಗೆ ಬಾಹ್ಯ ಪ್ರಪಂಚದ ನೂರಾರು ವಿಷಯಗಳನ್ನು ತಿಳಿಸುತ್ತದೆಯಾದರೂ ಜೀವನದ ಅರ್ಥ ಮತ್ತು ಉದ್ದೇಶಗಳನ್ನು ತಿಳಿಸಿದೆ,ತಿಳಿಸೀತು ಎನ್ನುವಂತಿಲ್ಲ. ಅಲ್ಬರ್ಟ್ ಐನ್‌ಸ್ಟೀನ್ ತನ್ನ ಕೊನೆಯ ದಿನಗಳಿಂದ ಸುಖ ಸೌಕರ್ಯಗಳಿಗೆ ಬೇಕಾದ ಕೆಲವು ಸಾಧನ ಸೌಲಭ್ಯಗಳನ್ನು ಒದಗಿಸಿದರೂ ಜೀವನದ ಪರಮೋದ್ದೇಶದ ತಿಳಿವು ಅದನ್ನು ಸಾಧಿಸುವ ಸಾಮರ್ಥ್ಯದ ಹೊಳಹು ಮತ್ತೊಂದು ಮೂಲದಿಂದಲೇ ಬರಬೇಕು ಅದನ್ನೇ ಧ್ವನಿಸುತ್ತದೆ.

**ಪ್ರಶ್ನೆಗಳು :** 1.ಅಮೇರಿಕಾದ ಪ್ರಸಿದ್ಧ ಮನೋವಿಜ್ಞಾನಿ ಏನು ಹೇಳಿದ್ದಾರೆ?

2. ನಮ್ಮಲ್ಲಿ ವಿಶೇಷ ಬದಲಾವಣೆ ಹೇಗೆ ಸಾಧ್ಯ?

**ಅಂ) ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.** **1*5=5**

44. ನಿಮ್ಮನ್ನು ಸರಕಾರಿ ಪ್ರೌಢಶಾಲೆ ಉಡುಪಿ ಇಲ್ಲಿಯ ವಿದ್ಯಾರ್ಥಿ ರಂಜಿತ್ /ರಂಜಿತಾ, ಎಂದು ಭಾವಿಸಿಕೊಂಡು ಮೈಸೂರಿನ ಹೊಳೆನರಸೀಪುರದಲ್ಲಿ ವಾಸಿಸುತ್ತಿರುವ ನಿಮ್ಮ ತಾಯಿ ಶಾರದ ಅವರಿಗೆ ನಿಮ್ಮ ವಿದ್ಯಾಭ್ಯಾಸದ ಪ್ರಗತಿಯ ಕುರಿತು ಪತ್ರ ಬರೆಯಿರಿ.

ಅಥವಾ

ನಿಮ್ಮ ಊರಿನ ರಸ್ತೆಗಳಿಗೆ ದಾರಿದೀಪವನ್ನು ಒದಗಿಸುವಂತೆ ವಿನಂತಿಸಿ ಗ್ರಾಮಪಂಚಾಯತ್ ಅಧ್ಯಕ್ಷರಿಗೆ ಪತ್ರ ಬರೆಯಿರಿ.

**ಅಃ) ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. 1*5=5**

45. ಪ್ಲಾಸ್ಟಿಕ್ ಮುಕ್ತ ಭಾರತ
ಅಥವಾ
ರಾಷ್ಟ್ರೀಯ ಹಬ್ಬಗಳು

# ಮಾದರಿ ಪ್ರಶ್ನೆಪತ್ರಿಕೆ – 2

**ವಿಷಯ : ಕನ್ನಡ ತರಗತಿ: 10**

**ಅಂಕಗಳು: 100** **ಸಮಯ : 3ಗಂಟೆ**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.** **6*1=6**

1. ಕನ್ನಡ ವರ್ಣಮಾಲೆಯಲ್ಲಿರುವ ಸಂಧ್ಯಕ್ಷರಗಳು
ಅ) ಅ, ಐ ಆ) ಐ, ಊ ಇ) ಐ, ಔ ಈ) ಓ, ಔ
2. ಅರಮನೆ ಇದು ಈ ಸಮಾಸಕ್ಕೆ ಉದಾಹರಣೆ
ಅ) ಕರ್ಮಧಾರೆಯ ಆ) ತತ್ಪುರುಷ ಇ) ದ್ವಿಗು ಈ) ಕ್ರಿಯಾ
3. 'ನಟ್ಟನಡುವೆ' ಇದು ಈ ವ್ಯಾಕರಣಾಂಶಕ್ಕೆ ಉದಾಹರಣೆ
ಅ) ಅನುಕರಣಾವ್ಯಯ ಆ) ನುಡಿಗಟ್ಟು ಇ) ದ್ವಿರುಕ್ತಿ ಈ) ಜೋಡುನುಡಿ
4. ಚತುರ್ಥಿ ವಿಭಕ್ತಿಯ ಕಾರಕಾರ್ಥ ಪದ ಇದು
ಅ) ಸಂಪ್ರದಾನ ಆ) ಅಪದಾನ ಇ) ಅಧಿಕರಣ ಈ) ಸಂಬಂಧ
5. 'ಷಡಾನನ' ಇದು ಈ ಸಂಧಿಗೆ ಉದಾಹರಣೆ
ಅ) ಜಶ್ತ್ವ ಆ) ಶ್ಚುತ್ವ ಇ) ಆದೇಶ ಈ) ವೃದ್ಧಿ
6. ಕಾರ್ಖಾನೆ ಇದು ಈ ಭಾಷೆಯಿಂದ ಬಂದ ಪದ
ಅ) ಉರ್ದು ಆ) ಅರಬ್ಬೀ ಇ) ಪೋರ್ಚುಗೀಸ್ ಈ) ಹಿಂದುಸ್ಥಾನಿ

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರೆಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.** 4*1=4

7. ಇನತನೂಜ ; ಕರ್ಣ :: ರಾಜೀವಸಖ ; ____________
8. ಯುದ್ಧ ; ಜುದ್ಧ :: ಪ್ರಸಾದ ; ____________
9. ಪರ್ವತ ; ರೂಢನಾಮ :: ವಿಜ್ಞಾನಿ ; ____________
10. ಮಾಲೆಗಾರ ; ತದ್ದಿತಾಂತ ನಾಮ : ಓಡಿದ; ____________

**III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **7*1=7**

11. ಗಡಿಪ್ರದೇಶದಲ್ಲಿ ವಿಮಾನ ದಾಳಿಯಿಂದ ರಕ್ಷಿಸಿಕೊಳ್ಳಲು ಯಾವ ನಿಯಮ ಪಾಲಿಸಲಾಗುತ್ತದೆ?
12. ಮೈಸೂರು ಸಂಸ್ಥಾನಕ್ಕೆ 'ಮಾದರಿ ಮೈಸೂರು' ಎಂಬ ಕೀರ್ತಿ ಯಾರ ಕಾಲದಲ್ಲಿ ಪ್ರಾಪ್ತವಾಯಿತು ?
13. ಶಾನುಭೋಗರ ಬ್ರಹ್ಮಾಸ್ತ್ರ ಯಾವುದು?
14. ಯಶೋಭದ್ರೆಯು ರತ್ನಕಂಬಳಿಗಳನ್ನು ಯಾರಿಗೆ ಕೊಟ್ಟಳು?
15. ಕುದುರೆಯನ್ನು ಲವನು ಯಾವುದರಿಂದ ಕಟ್ಟಿದನು?
16. ಪರಶುರಾಮನು ದ್ರೋಣನಿಗೆ ಯಾವ್ಯಾವ ಅಸ್ತ್ರಗಳನ್ನು ಕೊಟ್ಟನು ?
17. 'ಮೃಗ ಮತ್ತು ಸುಂದರಿ' ಕತೆಯು ಯಾವ ಕತೆಯ ಅನುವಾದವಾಗಿದೆ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** **10*2=20**

18. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು?
19. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣವೇನು?
20. ರಾಮನ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ಧತೆಗಳೇನು?

21. ವಿಶ್ವೇಶ್ವರಯ್ಯ ಕೈಗಾರಿಕೆಗೆ ಅಗ್ರ ಪ್ರಾಶಸ್ತ್ಯ ನೀಡಿದ ಬಗೆಯನ್ನು ವಿವರಿಸಿ.
22. ಕವಿಯ ಆತ್ಮವು ಹಸುರುಗಟ್ಟಲು ಕಾರಣವಾದ ಅಂಶಗಳಾವುವು?
23. ದ್ರೋಣನು ಶಪಥವನ್ನು ಮಾಡಲು ಕಾರಣ ತಿಳಿಸಿ.
24. ವಿವೇಕಾನಂದರು ಇಂದಿಗೂ ಸತ್ಯ. ಏಕೆ?
25. ಒಗಟುಗಳಿಂದ ಶೈಕ್ಷಣಿಕ ಲಾಭವಿದೆ. ಹೇಗೆ?
26. ವಸಂತ ಯಾರ್‍ಯಾರಿಗೆ ಮಖ ತೋರಲಿಲ್ಲ?
27. ಭಗತ್ ಸಿಂಗ್ ತನ್ನ ಸಹೋದರಿಗೆ 'ತ್ಯಾಗದ ಪ್ರತೀಕ ಆ ಮಣ್ಣು' ಎಂದನು. ಏಕೆ?

**V. ಕೆಳಗಿನ ಕವಿ/ಸಾಹಿತಿಗಳ ಕಾಲ, ಸ್ಥಳ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **2*3=6**

28. ರನ್ನ.
29. ವಿ. ಕೃ. ಗೋಕಾಕ್.

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ.** **1*3=3**

30. ಕಾದದಿರೆನಜ್ಜ ಪಾಂಡವ ರಾದರ್ ಮೇಣಿಂದಿನೊಂದೆ ಸಮರದೊಳಾಂ ಮೇ

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿರಿ :** **1*3=3**

31. ಶಾನುಭೋಗರ ವದನಾರವಿಂದದಲ್ಲಿ ಮುಗುಳುನಗೆ ಮೂಡಿತು.

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ** **1*3=3**

32. ಕೂಡಿಬಾಳಿದರೆ ಸ್ವರ್ಗ ಸುಖ

**ಅಥವಾ**

ತಾಳಿದವನು ಬಾಳಿಯಾನು

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **6*3=18**

33. "ಧನ್ಯನಾನು ಸಿದ್ಧರ ವರವಿಂದು ಫಲಿಸಿದೆ"
34. "ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ"
35. "ಸೊಡರಂ ನೋಡಿದಾಗಳ್ ಕಣ್ಣೀರ್ಗಳ್ ಸುರಿವುದುಮಂ"
36. "ಸಿಕ್ಕಿದ್ದು ತಗೊಂಡು ಸರದ ನಿಂತರೊ"
37. "ವರುಣನ ಲೋಕದಿಂ ಬಂದು ಮುಳಿದಪನೆಂ"
38. "ಗಿಳಿಯದೆ ಬಣ್ಣದ ನೋಟ"

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** 1*4=4

39. ಕಲುಷಿತವಾದೀ__________ ಮತಗಳೆಲ್ಲವೂ __________

| | | |
|---|---|---|
| __________ | ಅಥವಾ | __________ |
| __________ | | __________ |
| __________ಮುತ್ತೋಣ | | __________ ಬಿತ್ತೋಣ |

**XI.ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ** 1*4=4

40. ಮರುಳು ಮಾಧವ ಮಹಿಯ ರಾಜ್ಯದ
ಸಿರಿಗೆ ಸೋಲುವನಲ್ಲ ಕೌಂತೇ
ಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ
ಹೊರೆದ ದಾತಾರಂಗೆ ಹಗೆವರ
ಶಿರವನರಿದೊಪ್ಪಿಸುವೆನೆಂಬೀ
ಭರದೊಳಿರ್ದೆನು ಕೌರವೇಂದ್ರನ ಕೊಂದೆ ನೀನೆಂದ

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 2*4=8**

41. ದುಷ್ಟಬುದ್ಧಿಯ ತಂತ್ರ ಅವನಿಗೆ ತಿರುಗುಬಾಣವಾದ ಬಗೆಯನ್ನು ವಿವರಿಸಿ.

**ಅಥವಾ**

ವೃಕ್ಷಸಾಕ್ಷಿ ಪಾಠದಲ್ಲಿ ನೀವು ಮೆಚ್ಚುವ ಪಾತ್ರ ಯಾವುದು? ಏಕೆ?

42. ಕಾಲಚಕ್ರದ ಮುಂದೆ ಎಲ್ಲರೂ ತಲೆಬಾಗಲೇಬೇಕು ಎಂಬುದು ಹಕ್ಕಿ ಹಾರುತಿದೆ ಪದ್ಯದಲ್ಲಿ ಹೇಗೆ ವ್ಯಕ್ತವಾಗಿದೆ?

**ಅಥವಾ**

ಹಕ್ಕಿಯನ್ನು ಕಾಲಗತಿಗೆ ಹೋಲಿಸುತ್ತ ಕವಿ ಹೇಳಿರುವ ಮಾತುಗಳಾವುವು?

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಿರಿ 2+2=4**

43. ರಾಮಕೃಷ್ಣ ಪರಮಹಂಸರು ಪರಮದೈವಭಕ್ತ. ಯಾವಾಗಲೂ ದೇವರನ್ನು ಕುರಿತು ಚಿಂತಿಸುತ್ತಿದ್ದರು. ಅವರಿಗೆ ಎಲ್ಲರಲ್ಲಿಯೂ ದೇವರ ಭಾವನೆ ಇತ್ತು. ಅವರು ಸಾಧಾರಣ ಗುರುಗಳಲ್ಲ. ದೇವರನ್ನು ನೋಡುವ ಶಕ್ತಿಯ ಮಟ್ಟದಲ್ಲಿ ಇರುವ ಗುರುಗಳು. ಧ್ಯಾನ ಮಾಡುವಾಗಲೆಲ್ಲ ದೇವರ ಜೊತೆ ಮಾತನಾಡುತ್ತಾ ಕಾಲ ಕಳೆಯುತ್ತಿದ್ದರು ಎಂದು ಅವರ ಶಿಷ್ಯರು ಹೇಳುತ್ತಿದ್ದರು. ಮುಗ್ಧ ಮನಸ್ಸುಳ್ಳವರು ದೊಡ್ಡ ಜ್ಞಾನಿಗಳಾಗುವರು. ಅವರ ಮನಸ್ಸನ್ನು ನಾವು ಅರ್ಥ ಮಾಡಿಕೊಂಡರೆ ಅವರೆಷ್ಟು ಮಹಾತ್ಮರೆಂದು ಗೊತ್ತಾಗುವುದು. ರಾಮಕೃಷ್ಣರು ತಮ್ಮ ಪತ್ನಿ ಶಾರದಾದೇವಿಯವರನ್ನು ತಾಯಿಯ ಭಾವನೆಯಿಂದ ನೋಡುತ್ತಿದ್ದರು. ಶಾರದಾದೇವಿಯವರಿಗೆ ಆರೋಗ್ಯ ಸರಿ ಇಲ್ಲದಿರುವಾಗ ಮಹಿಳೆಯರನ್ನು ಕಳುಹಿಸಿ ಶುಶ್ರೂಷೆ ಮಾಡಿಸುತ್ತಿದ್ದರು. ಶಾರದಾಮಾತೆಗೆ ಒಂದು ಚೂರೂ ನೋವಾಗದಂತೆ ನೋಡಿಕೊಳ್ಳುತ್ತಿದ್ದರು. ಅವರ ಗುಣಗಳು, ಆದರ್ಶಗಳು ತುಂಬಾ ಅದ್ಭುತ.

**ಪ್ರಶ್ನೆಗಳು :**

1. ರಾಮಕೃಷ್ಣ ಪರಮಹಂಸರ ದೈವಭಕ್ತಿಯ ಬಗ್ಗೆ ವಿವರಿಸಿ.
2. ಪರಮಹಂಸರು ಶಾರದಾ ದೇವಿಯವರ ಮೇಲೆ ಹೇಗೆ ಕಾಳಜಿ ವಹಿಸುತ್ತಿದ್ದರು?

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ: 1*5=5**

44. ನಿಮ್ಮನ್ನು ಶಿರಸಿಯ ಮಾರಿಕಾಂಬಾ ಪ್ರೌಢಶಾಲೆಯ ವಿದ್ಯಾರ್ಥಿ ವಿಜಯ್' ಎಂದು ಭಾವಿಸಿಕೊಂಡು, ಉಡುಪಿ ಜಿಲ್ಲೆಯ ಬ್ರಹ್ಮಾವರದಲ್ಲಿ ವಾಸಿಸುತ್ತಿರುವ ನಿಮ್ಮ ತಾಯಿ ಸರಸ್ವತಿ ಅವರಿಗೆ ನಿಮ್ಮ ಶೈಕ್ಷಣಿಕ ಪ್ರಗತಿಯ ಕುರಿತು ಪತ್ರ ಬರೆಯಿರಿ.

**ಅಥವಾ**

ನಿಮ್ಮ ಮುಂದಿನ ವಿದ್ಯಾಭ್ಯಾಸಕ್ಕಾಗಿ ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿಯನ್ನು ನೀಡುವಂತೆ ಕೋರಿ ಮುಖ್ಯೋಪಾಧ್ಯಾಯರಿಗೆ ಪತ್ರ ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ 15 ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ:** 1*5=5

45. ಸ್ವಚ್ಛ ಭಾರತ ಅಭಿಯಾನದಲ್ಲಿ ವಿದ್ಯಾರ್ಥಿಗಳ ಪಾತ್ರ

**ಅಥವಾ**

ಗ್ರಂಥಾಲಯದ ಮಹತ್ವ

# ಮಾದರಿ ಪ್ರಶ್ನೆಪತ್ರಿಕೆ – 3

**ಸಮಯ: 3 ಗಂಟೆಗಳು** **ವಿಷಯ : ಪ್ರಥಮ ಭಾಷೆ ಕನ್ನಡ** **ಗರಿಷ್ಠ ಅಂಕಗಳು: 100**

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. 6 x1 = 6**

1. ಯಣ್ ಸಂಧಿಗೆ ಉದಾಹರಣೆಯಾಗಿರುವ ಪದವಿದು;
   (ಎ) ಅತ್ಯವಸರ (ಬಿ) ದ್ರವ್ಯಾರ್ಥಿ (ಸಿ) ಜಗಜ್ಜ್ಯೋತಿ(ಡಿ) ಸೂರ್ಯೋದಯ
2. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಈ ಚಿಹ್ನೆಯನ್ನು ಬಳಸಲಾಗುವುದು;
   (ಎ) ಆವರಣ (ಬಿ) ಉದ್ಧರಣ (ಸಿ) ವಾಕ್ಯವೇಷ್ಟನ (ಡಿ) ವಿವರಣಾತ್ಮಕ
3. ಕಾರವಾರದಲ್ಲಿ ಮಲೇರಿಯಾ ವ್ಯಾಪಕವಾಗಿ ಹಬ್ಬಿತ್ತು; ಆದ್ದರಿಂದ ವೀರೇಶ್ವರ ಪಾಠಕರವರು ಮಲೇರಿಯಾದಿಂದ ಬಳಲಬೇಕಾಯಿತು; ಈ ಕಾರಣದಿಂದ ಅವರನ್ನು ಅಲ್ಲಿಂದ ವರ್ಗಾಹಿಸಲಾಯಿತು. –ಈ ವಾಕ್ಯವು;
   (ಎ) ಸಾಮಾನ್ಯವಾಕ್ಯ (ಬಿ) ಮಿಶ್ರವಾಕ್ಯ (ಸಿ) ಸಂಯೋಜಿತವಾಕ್ಯ (ಡಿ) ವಿಶೇಷವಾಕ್ಯ
4. ಕೃದಂತಾವ್ಯಯಕ್ಕೆ ಉದಾಹರಣೆಯಾದ ಪದವಿದು;
   (ಎ) ಬರೆಯದ (ಬಿ) ಬರೆಯುವಿಕೆ (ಸಿ) ಬರೆಯಲಿಕ್ಕೆ (ಡಿ) ಬರೆದ
5. 'ಕೆಮ್ಮನೆ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ;
   (ಎ) ಸಾಮಾನ್ಯಾವ್ಯಯ (ಬಿ) ಅನುಕರಣಾವ್ಯಯ(ಸಿ) ಭಾವಸೂಚಕಾವ್ಯಯ (ಡಿ) ಅವಧಾರಣಾರ್ಥಕಾವ್ಯಯ
6. ಇವುಗಳಲ್ಲಿ ತದ್ಭವ ರೂಪಕ್ಕೆ ಉದಾಹರಣೆಯಾದ ಪದವಿದು;
   (ಎ) ಪ್ರಾಣ (ಬಿ) ಪ್ರಸಾದ (ಸಿ) ಪಾದುಕಾ (ಡಿ) ಪಡಿಯಜಿ

**II. ಈ ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ. 4 x1 = 4**

7. ತಾರೀಖು : ಉರ್ದು : : ತಕರಾರು : ....................
8. ಪೂದೋಟ : ತತ್ಪುರುಷ ಸಮಾಸ : : ಸೊಲ್ಗೇಳಿ : ....................
9. ಕನಕಪಾತ್ರ : ಚಿನ್ನದ ಪಾತ್ರೆ : : ಮೃತ್ಪಾತ್ರ : ....................
10. ಧೀರಶೂರ : ಜೋಡುನುಡಿ : : ನಟ್ಟನಡುವೆ : ....................

**III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 7 x1 = 7**

11. ರಾಮಲಕ್ಷ್ಮಣನಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು?
12. ಧರ್ಮಾಧಿಕರಣರು ವಟವೃಕ್ಷದ ಸಮೀಪಕ್ಕೆ ಏಕೆ ಬಂದರು?
13. ಬೇಂದ್ರೆಯವರ ಪ್ರಕಾರ ಹಕ್ಕಿಯು ಯಾವುದರ ಸಂಕೇತವಾಗಿದೆ?
14. ಹಲಗಲಿ ಲಾವಣಿಗೆ ಕಾರಣವಾದ ಘಟನೆ ಯಾವುದು?
15. ನಾರಣಪ್ಪನಿಗೆ ಕುಮಾರವ್ಯಾಸನೆಂಬ ಹೆಸರು ಏಕೆ ಬಂದಿತು?
16. ವಿವೇಕಾನಂದರು ಯಾವ ವ್ಯವಸ್ಥೆಯನ್ನು ವಿರೋಧಿಸುತ್ತಾರೆ?
17. ಭಗತ್‌ಸಿಂಗ್‌ನ ಸಹಚರರು ಯಾರು?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 10 x2 = 20**

18. ನಿರ್ಜೀವವಾಗಿರುವ ಮಗುವನ್ನು ನೋಡಿ ಮುದುಕಿ ನಿರಾಶೆಯಿಂದ ಹೇಳಿದ್ದೇನು?

19. ಲಂಡನ್ ನಗರದಲ್ಲಿ ಸಾಮ್ರಾಟರ ರಾಜ್ಯಾಭಿಷೇಕವಾಗುವ ಸಿಂಹಾಸನದ ಮೇಲಿರುವ ಕಲ್ಲುಪಾಟಿಯ ವಿಶೇಷತೆಯೇನು?

20. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ವಿವರಿಸಿ.

21. ಧರ್ಮಾಧಿಕರಣರು ವಟವೃಕ್ಷಕ್ಕೆ ಏನು ಹೇಳಿದರು?

22. ಕವಿಯಾತ್ಮವು ಹಸುರುಗಟ್ಟಲು ಕಾರಣವಾದ ಹಿನ್ನೆಲೆಯ ಅಂಶಗಳೇನು?

23. ದ್ರೋಣನು ಶಪಥ ಮಾಡುವಾಗ ಹೇಳಿದ ಮಾತುಗಳಾವುವು?

24. ವಿವೇಕಾನಂದರು ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಹೇಳಿದ್ದೇನು?

25. ಭಗತ್‌ಸಿಂಗ್‌ನ ಸಹೋದರಿಗೆ ಅವನ ಉಪವಾಸಕ್ಕೆ ಕಾರಣಗಳು ಹೇಗೆ ತಿಳಿದು ಬಂದಿತು?

26. ದೇವತೆ ಕೊಟ್ಟ ಶಾಪವೇನು? ಶಾಪ ವಿಮೋಚನೆಯ ಫಲವೇನು?

27. 'ಬೀಸುಕಲ್ಲು' ಎಂಬ ಉತ್ತರ ಬರಲು ಹೇಳಿದ ಒಗಟು ಯಾವುದು?

**V. ಕೆಳಗಿನ ಕವಿ/ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2x3=6**

28. ದೇವನೂರು ಮಹಾದೇವ

29. ರನ್ನ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1 x3 = 3**

27. ಅತಿಕುಟಿಲಮನಂ ಧನಲು ಬ್ಧತೆಯಿಂದಂ ದುಷ್ಟಬುದ್ಧಿ ನುಡಿದಂ ಪುಸಿಯಂ

28. **VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ. 1 x3 = 3**

29. ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು; ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ.1x3 = 3**

32. ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು.

**ಅಥವಾ**

ಕೂಡಿ ಬಾಳಿದರೆ ಸ್ವರ್ಗ ಸುಖ.

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6 x3 = 18**

33. "ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ"

34. "ಆವಂತಿ ಸುಕುಮಾರನೆಂದು ಪೆಸರನಿಟ್ಟಂ"

35. "ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು"

36. "ಜಲಕ್ಕನೀಗಳರಜೆದೆಂ ಸಿರಿ ಕಳ್ಳೊಡವುಟ್ಟಿತೆಂಬುದಂ"

37. "ಅವರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು"

38. "ಆವುದೀ ಮರುಳು ನಮ್ಮೆಡೆಗೆ ಬರುತಿಹುದು"

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1x4 = 4**

39. ಕಲುಷಿತವಾದೀ ................................
.......................................................
.......................................................
...................................... ಮುಟ್ಟೋಣ

ಅಥವಾ

ಮತಗಳೆಲ್ಲವೂ ..................................
.......................................................
.......................................................
........................................... ಬಿತ್ತೋಣ

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ. 1 x4 = 4**

40. ಬೆಳ್ಳಿಯ ಹಳ್ಳಿಯ ಮೇರೆಯ ಮೀರಿ ತಿಂಗಳಿನೂರಿನ ನೀರನು ಹೀರಿ
ಆಡಲು ಹಾಡಲು ತಾ ಹಾರಾಡಲು
ಮಂಗಳ ಲೋಕದ ಅಂಗಳಕೇರಿ
ಹಕ್ಕಿ ಹಾರುತಿದೆ ನೋಡಿದಿರಾ?

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2 x4 = 8**

41. ಶಬರಿಯ ಚಿಂತೆ ಹಿಂಗಿಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.

**ಅಥವಾ**

ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ?

42. ಕರ್ಣನಿಗೆ ಶ್ರೀಕೃಷ್ಣನು ಒಡ್ಡಿದ ಆಮಿಷಗಳೇನು?

**ಅಥವಾ**

ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1 x4 = 4**

43. ಆಲೂರು ವೆಂಕಟರಾಯರು ಅಖಂಡ ಕರ್ನಾಟಕದ ಕನಸನ್ನು ನನಸಾಗಿಸಲು ಹೋರಾಟ ನಡೆಸುತ್ತಾ ಸ್ವತಂತ್ರ ಭಾರತದ ಹೋರಾಟದಲ್ಲಿಯೂ ಭಾಗವಹಿಸಿದ್ದರು. "ಭಾರತವನ್ನು ಬಿಟ್ಟು ಕರ್ನಾಟಕವಿಲ್ಲ; ಕರ್ನಾಟಕವನ್ನು ಬಿಟ್ಟು ಭಾರತವಿಲ್ಲ" ಎಂಬುದು ಅವರ ಸ್ಪಷ್ಟ ನಿಲುವಾಗಿತ್ತು. ಅಂದು ವಿದೇಶಿ ವಸ್ತುಗಳ ಮಾರಾಟದಿಂದ ಸ್ವದೇಶಿ ವಸ್ತುಗಳ ಮಾರಾಟ ಕಡಿಮೆಯಾಗಿ ನಮ್ಮ ಅನೇಕ ಕೈಗಾರಿಕೆಗಳು ಮೂಲೆ ಸೇರುತ್ತಾ ಬಂದವು. ಇದನ್ನು ಪ್ರತಿಭಟಿಸಲು ತಲೆ ಎತ್ತಿದ "ವಿದೇಶಿ ವಸ್ತುಗಳ ಬಹಿಷ್ಕಾರ; ಸ್ವದೇಶಿ ವಸ್ತುಗಳ ಪುರಸ್ಕಾರ" ಚಳವಳಿಯಲ್ಲಿ ದುಮುಕಿ ಮಂಗಳೂರು ಹೆಂಚು ಮತ್ತು ಸೀಸದ ಕಡ್ಡಿ ತಯಾರಿಸುವ ಕಾರ್ಖಾನೆಗಳ ಸ್ಥಾಪನೆಗೆ ಜನರನ್ನು ಹುರಿದುಂಬಿಸಿದರಲ್ಲದೆ ತಾವೂ ಸ್ಥಾಪಿಸಿ, ಮಾದರಿಯಾದರು. ಮಕ್ಕಳ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಶಿಕ್ಷಣದ ಪಾತ್ರ ದೊಡ್ಡದು. ಆದರೆ ಭಾರತೀಯರು ಪಡೆಯುತ್ತಿದ್ದ ಶಿಕ್ಷಣ ಅವರಿಗೆ ಸ್ವದೇಶವನ್ನೂ, ಸ್ವದೇಶ ಸಂಸ್ಕೃತಿಯನ್ನೂ ಮರೆಸುತ್ತಲಿದ್ದಿತು. ಈ ಅಪಾಯವನ್ನು ತಪ್ಪಿಸಲು ನಮ್ಮ ದೇಶ, ನಮ್ಮ ಸಂಸ್ಕೃತಿಗಳನ್ನು ಪೋಷಿಸುವ 'ರಾಷ್ಟ್ರೀಯ ಶಿಕ್ಷಣ ಚಳವಳಿ'ಯು ಆಗ ಭಾರತದಲ್ಲೆಲ್ಲಾ ವ್ಯಾಪಿಸಿದ್ದಿತು. ವೆಂಕಟರಾಯರು ಈ ಚಳವಳಿಯಲ್ಲಿಯೂ ದುಮುಕಿ ಧಾರವಾಡದಲ್ಲಿ 'ಕರ್ನಾಟಕ ನೂತನ ವಿದ್ಯಾಲಯ' ಎಂಬ ರಾಷ್ಟ್ರೀಯ ವಿದ್ಯಾಲಯವನ್ನು ಸ್ಥಾಪಿಸಿದರು.

**ಪ್ರಶ್ನೆಗಳು :**

ಅ) ಆಲೂರು ವೆಂಕಟರಾಯರು ಸ್ವದೇಶಿ ಚಳವಳಿಯ ಮೂಲಕ ಹೇಗೆ ಮಾದರಿ ಎನಿಸಿದರು?

ಬ) ಆಲೂರು ವೆಂಕಟರಾಯರು ರಾಷ್ಟ್ರೀಯ ವಿದ್ಯಾಲಯವನ್ನು ಸ್ಥಾಪಿಸಲು ಕಾರಣವೇನು?

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1 x5 = 5**

44. ನಿಮ್ಮನ್ನು ಚಾಮರಾಜ ನಗರ ಜಿಲ್ಲೆಯ ಉಡಿಗಾಲ ಗ್ರಾಮದ ಜೆ. ಎಸ್. ಎಸ್. ಪ್ರೌಢಶಾಲೆಯ ವಿದ್ಯಾರ್ಥಿ 'ಸಂಕಲ್ಪ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ನಡೆದ 'ವಿವೇಕಾನಂದರ ಜನ್ಮ ದಿನಾಚರಣೆ' ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಕೋರಿ ಬೆಂಗಳೂರಿನ 'ಕನ್ನಡಪ್ರಭ' ದಿನಪತ್ರಿಕೆಯ ಸಂಪಾದಕರಿಗೆ ಮನವಿ ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ರಾಮನಗರ ಜಿಲ್ಲೆಯ ಕನಕಪುರದ ಆದರ್ಶ ವಸತಿ ಶಾಲೆಯ ವಿದ್ಯಾರ್ಥಿ 'ಯಶಸ್' ಎಂದು ಭಾವಿಸಿಕೊಂಡು, ನಿಮ್ಮ ವಿದ್ಯಾಭ್ಯಾಸದ ಪ್ರಗತಿಯನ್ನು ತಿಳಿಸಿ, ಮಳವಳ್ಳಿಯ ನಿವಾಸಿಯಾದ ನಿಮ್ಮ ತಂದೆ ಮಂಜಪ್ಪ ಎಂಬುವವರಿಗೆ ಪತ್ರ ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. 1x5= 5**

45. ಮಹಿಳಾ ಸಬಲೀಕರಣ

ಅಥವಾ

ಸ್ವಚ್ಛ ಭಾರತ ಅಭಿಯಾನ

# ಮಾದರಿ ಪ್ರಶ್ನೆಪತ್ರಿಕೆ – 4

**ಸಮಯ: 3 ಗಂಟೆಗಳು** **ವಿಷಯ : ಪ್ರಥಮಭಾಷೆ ಕನ್ನಡ** **ಗರಿಷ್ಠ ಅಂಕಗಳು: 100**

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **6 x1 = 6**

1. ಶ್ಚುತ್ವ ಸಂಧಿಗೆ ಉದಾಹರಣೆಯಾಗಿರುವ ಪದವಿದು;
(ಎ) ವಾಗ್ದೇವಿ (ಬಿ) ಅಷ್ಟೈಶ್ವರ್ಯ (ಸಿ) ಜಗಜ್ಜ್ಯೋತಿ (ಡಿ) ಮದೋನ್ಮತ್ತ
2. ಪಾರಿಭಾಷಿಕ ಪದಗಳನ್ನು ಬಳಸುವಾಗ, ಅನ್ಯಭಾಷೆಯ ಪದಗಳನ್ನು ಬಳಸುವಾಗ, ಪ್ರಮುಖ ಪದಗಳನ್ನು ಸೂಚಿಸುವಾಗ ಈ ಚಿಹ್ನೆಯನ್ನು ಬಳಸಲಾಗುವುದು;
(ಎ) ಆವರಣ (ಬಿ) ಉದ್ಧರಣ (ಸಿ) ವಾಕ್ಯವೇಷ್ಠನ (ಡಿ) ವಿವರಣಾತ್ಮಕ
3. 'ಚಂದ್ರನವೊಲ್' ಪದವು ವ್ಯಾಕರಣಾಂಶದ ಈ ಗುಂಪಿಗೆ ಸೇರಿದೆ;
(ಎ) ತದ್ಧಿತಾಂತನಾಮ (ಬಿ) ತದ್ಧಿತಾಂತ ಭಾವನಾಮ (ಸಿ) ಕೃದಂತಾವ್ಯಯ (ಡಿ) ತದ್ಧಿತಾಂತಾವ್ಯಯ
4. 'ಏಕಾಂತಕ್ಕೆ' ಪದದಲ್ಲಿರುವ ವಿಭಕ್ತಿಯ ಹೆಸರು;
(ಎ) ಚತುರ್ಥೀ (ಬಿ) ಪಂಚಮೀ (ಸಿ) ಷಷ್ಠೀ (ಡಿ) ಸಪ್ತಮೀ
5. 'ಉಂಟು' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ;
(ಎ) ಸಾಮಾನ್ಯಾವ್ಯಯ (ಬಿ) ಅನುಕರಣಾವ್ಯಯ (ಸಿ) ಭಾವಸೂಚಕಾವ್ಯಯ (ಡಿ) ಕ್ರಿಯಾರ್ಥಕಾವ್ಯಯ
6. ಇವುಗಳಲ್ಲಿ ತತ್ಸಮ ರೂಪಕ್ಕೆ ಉದಾಹರಣೆಯಾದ ಪದವಿದು;
(ಎ) ಸಿರ (ಬಿ) ಸಸಿ (ಸಿ) ಸ್ಥಾನ (ಡಿ) ಸೀರೆ

**II. ಈ ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧಿ ಪದವನ್ನು ಬರೆಯಿರಿ.** **4 x1 = 4**

7. ಕಾರು : ಇಂಗ್ಲಿಷ್ : : ಕುರ್ಚಿ : ..................
8. ಮೂಗಾವುದ : ದ್ವಿಗು ಸಮಾಸ : : ತಲೆನೋವು : ..................
9. ರವಿಸುತ : ಕರ್ಣ : : ರಾಜೀವಸಖ : ..................
10. ಮಂಡಲಗಿಂಡಲ : ಜೋಡುನುಡಿ : : ಬಟ್ಟಬಯಲು : ..................

**III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7 x1 = 7**

11. ರಾಹಿಲನು ಮುದುಕಿಯ ಎದುರಿಗೆ ನುಡಿದ ಗಂಭೀರವಾದ ಮಾತು ಯಾವುದು?
12. ಶ್ರೀರಾಮನು ಯಾರನ್ನು ನೆನೆದು ಶೋಕತಪ್ತನಾಗಿದ್ದನು?
13. ದೇವನೂರರ 'ನನ್ನ ದೇವರು' ಯಾರೆಂಬುದನ್ನು ಸ್ಪಷ್ಟೀಕರಿಸಿ.
14. ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು?
15. ಅರಸ ವೃಷಭಾಂಕನ ಉಂಗುರವು ಯಾವಾಗ ಕೆಳಕ್ಕೆ ಬಿದ್ದಿತು?
16. ದ್ರುಪದನು ಪಡಿಯಜನಿಗೆ ಏನೆಂದು ಹೇಳಿಕಳುಹಿಸಿದನು?
17. ಪುಟ್ಟಪೋರಿ ಏನು ಮಾಡುತ್ತಿದ್ದಾಳೆ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **10 x2 = 20**

18. ಮುದುಕಿಯು ರಾಹಿಲನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳೇನು?
19. ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೆ ಏನು? ವಿವರಿಸಿ.

20. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು?

21. ಸುಕುಮಾರಸ್ವಾಮಿಯ ವ್ಯಾಧಿಗೆ ಮದ್ದನ್ನು ಏಕೆ ಮಾಡಿಸಿಲ್ಲ ಎಂದು ಅರಸನು ಕೇಳಿದಾಗ ತಾಯಿ ಯಶೋಭದ್ರೆಯು ಏನೆಂದು ಹೇಳಿದಳು?

22. ದಂಡು ಹಲಗಲಿಯ ಮೇಲೆ ಹೇಗೆ ದಾಳಿ ನಡೆಸಿತು?

23. ದ್ರುಪದನು ದ್ರೋಣರಿಗೆ ಗರ್ವದಿಂದ ಹೇಳಿದ ಮಾತುಗಳಾವುವು?

24. ವಿವೇಕಾನಂದರು ಕೋಮುವಾದದ ಕಟ್ಟಾ ವಿರೋಧಿಯಾಗಿದ್ದರು ಏಕೆ?

25. ಜಲಿಯನ್ ವಾಲಾಬಾಗ್‌ನಲ್ಲಿರುವ ಒಕ್ಕಣೆ ಏನು?

26. ಮೃಗದ ಬಗೆಗೆ ಸುಂದರಿಯ ಮನ ಕರಗುತ್ತಿತ್ತು ಏಕೆ?

27. 'ಗರಿಕೆಯ ಹುಲ್ಲು' ಎಂಬ ಉತ್ತರ ಬರಲು ಹೇಳಿದ ಒಗಟು ಯಾವುದು?

**V. ಕೆಳಗಿನ ಕವಿ/ ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2x3=6**

28. ಪು. ತಿ. ನರಸಿಂಹಾಚಾರ್

29. ಲಕ್ಷ್ಮೀಶ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1 x3 = 3**

30. ಮೇದಿನಿಯಂ ಕ್ರಮಕ್ರಮದೆ ಪರ್ವಿದುದಾತ್ತನಭೋವಿಭಾಗಮಾ

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ. 1 x3 = 3**

31. ಮಾರಿಗೌತಣವಾಯ್ತು ನಾಳಿನ ಭಾರತವು

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1 x3 = 3**

32. ಸತ್ಯಕ್ಕೆ ಸಾವಿಲ್ಲ; ಸುಳ್ಳಿಗೆ ಸುಖವಿಲ್ಲ.

**ಅಥವಾ**

ಶಕ್ತಿಗಿಂತ ಯುಕ್ತಿ ಮೇಲು.

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6x3 = 18**

33. "ಪ್ರವಾಸವು ಶಿಕ್ಷಣದ ಒಂದು ಭಾಗವಾಗಿದೆ."

34. "ಹುಸಿಯದ ಬೇಹಾರಿಯೇ ಇಲ್ಲ."

35. "ಪ್ರೀತಿಯ ಹಣತೆಯ ಹಚ್ಚೋಣ"

36. "ಹಸುರತ್ತಲ್, ಹಸುರಿತ್ತಲ್, ಹಸುರೆತ್ತಲ್"

37. "ಹೊತ್ತು! ಹೊತ್ತು! ಹೊತ್ತೇ ಹಣ"

38. "ಖಂಡವಿದೆ ಕೋ ಮಾಂಸವಿದೆಕೋ ಗುಂಡಿಗೆಯ ಬಿಸಿ ರಕ್ತವಿದೆಕೋ"

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1 x4 = 4**

| | | | |
|---|---|---|---|
| 39. | ನೀಲಮೇಘ ಮಂಡಲ ...................... | | ಯುಗಯುಗಗಳ .............................. |
| | ........................................................ | | ........................................................ |
| . | ........................................................ | **ಅಥವಾ** | ........................................................ |
| | ........................................................ | | ........................................................ |
| | ಹಕ್ಕಿ ಹಾರುತಿದೆ ನೋಡಿದಿರಾ? | | ಹಕ್ಕಿ ಹಾರುತಿದೆ ನೋಡಿದಿರಾ? |

**XI.ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ.** **1 x4 = 4**

40. ಕೊರಳಸೆರೆ ಹಿಗ್ಗದವು ದೃಗುಜಲ ಉರವಣಿಸಿ ಕಡು ನೊಂದನಕಟಾ
ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ ।
ಹರಿಯ ಹಗೆ ಹೊಗೆದೋರದುರುಹದೆ
ಬರಿದೆ ಹೋಹುದೆ ತನ್ನ ವಂಶವ
ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ ॥

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2 x4 = 8**

41. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು 'ಮಾದರಿ ಮೈಸೂರು ರಾಜ್ಯ' ಹೇಗಾಯಿತು?

**ಅಥವಾ**

ವಿಶ್ವೇಶ್ವರಯ್ಯ ಅವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.

42. ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ.

**ಅಥವಾ**

ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **1x4=4**

43. ಕರ್ನಾಟಕ ಭೂಪ್ರದೇಶದ ವಿವರಣೆಯನ್ನು ಗಮನಿಸುವುದಾದರೆ ಒಟ್ಟಾರೆ ಭೂವಿಸ್ತೀರ್ಣದ ಸುಮಾರು ಶೇಕಡ 15 ರಷ್ಟು ಭಾಗ ಮಾತ್ರ ಅರಣ್ಯಾವೃತವಾಗಿದೆ. ಭಾರತದ ಇತರ ರಾಜ್ಯಗಳಲ್ಲಿಯ ಹಾಗೂ ಒಟ್ಟಾರೆ ಭಾರತದಲ್ಲಿಯ ಅರಣ್ಯ ಸರಾಸರಿಗಿಂತ ತುಂಬಾ ಕಡಿಮೆಯಾಗಿದೆ. ಸುಮಾರು ಮೂರನೆಯ ಒಂದು ಭಾಗದಷ್ಟು ಅರಣ್ಯ ಪ್ರದೇಶವಿರಬೇಕೆಂಬ ಆದರ್ಶದೊಂದಿಗೆ ಹೋಲಿಸಿದರಂತೂ ತೀರ ಕಡಿಮೆಯೆಂದೇ ತೋರುತ್ತದೆ. ವಿವೇಚನಾ ರಹಿತವಾಗಿ ಕಾಡುಗಳನ್ನು ಕಡಿಯುತ್ತಿರುವುದು, ತೀವ್ರ ಕಾಳಜಿಯಿಂದ ಅರಣ್ಯ ಸಂವರ್ಧನೆ ನಡೆಯದೆ ಇರುವುದು, ಬೃಹತ್ ಜಲವಿದ್ಯುತ್ ಹಾಗೂ ಗಣಿಗಾರಿಕೆ ಯೋಜನೆಗಳನ್ನು ಕೈಗೊಳ್ಳುತ್ತಿರುವುದು, ಇದರಿಂದಾಗಿ ಮರುವಸತಿಗಾಗಿ ಹಾಗೂ ಕೃಷಿ ಭೂಮಿಗಾಗಿ ಕಾಡುಗಳನ್ನು ಸವರಿಹಾಕುತ್ತಿರುವುದು – ಇವೇ ಮೊದಲಾದ ಕಾರಣಗಳಿಂದಾಗಿ ಕಾಡಿನ ಪ್ರಮಾಣ ಮತ್ತಷ್ಟು ಕಡಿಮೆಯಾಗುತ್ತಿದೆ. ಇದರಿಂದ ಸಸ್ಯ ಹಾಗೂ ಪ್ರಾಣಿ ಸಂಪತ್ತಿಗೆ ಆತಂಕಕಾರಿ ಪರಿಸ್ಥಿತಿ ಏರ್ಪಡುತ್ತಿದೆ. ಕಾಡಿನ ನಾಶವನ್ನು ಅದರ ದುಷ್ಪರಿಣಾಮಗಳನ್ನು ಮನಗಂಡು ತಡವಾಗಿಯಾದರೂ ಅಲ್ಲಲ್ಲಿ ಅರಣ್ಯ ಸಂವರ್ಧನ ಕಾರ್ಯಕ್ರಮಗಳನ್ನು ಸರ್ಕಾರ ಕೈಗೊಳ್ಳುತ್ತಿದೆ. ಅನೇಕ ಪರಿಸರ ಪ್ರೇಮಿಗಳು ಅರಣ್ಯ ರಕ್ಷಿಸುವಲ್ಲಿ ಕೈಜೋಡಿಸುತ್ತಿದ್ದಾರೆ. ವಿಶಿಷ್ಟ ಪ್ರಾಣಿ ಸಂತತಿಯ ಸಂರಕ್ಷಣೆಯ ದೃಷ್ಟಿಯಿಂದ 'ಹುಲಿ ಯೋಜನೆ'ಯಂತಹ ಕಾರ್ಯಕ್ರಮಗಳು ಆರಂಭಗೊಳ್ಳುತ್ತಿರುವುದು, 'ಹಾವುಗಳ ಉದ್ಯಾನವನ' ನಿರ್ಮಿಸಿರುವುದು ಸ್ವಲ್ಪಮಟ್ಟಿಗಾದರೂ ಸಮಾಧಾನತರುವಂತಹ ಉಪಕ್ರಮಗಳಾಗಿವೆ.

**ಪ್ರಶ್ನೆಗಳು :**

ಅ) ಯಾವ ಯಾವ ಕಾರಣಗಳಿಂದಾಗಿ ಸಸ್ಯ ಹಾಗೂ ಪ್ರಾಣಿ ಸಂಪತ್ತಿಗೆ ಆತಂಕಕಾರಿ ಪರಿಸ್ಥಿತಿ ಉಂಟಾಗಿದೆ?

ಬ) ಸಸ್ಯ ಹಾಗೂ ಪ್ರಾಣಿ ಸಂಪತ್ತಿನ ರಕ್ಷಣೆಗೆ ಕೈಗೊಂಡಿರುವ ಕ್ರಮಗಳೇನು?

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.** **1 x5 = 5**

44. ನಿಮ್ಮನ್ನು ರಾಮನಗರ ಜಿಲ್ಲೆಯ ಹೆಬ್ಬಕೋಡಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಅಭಿಲಾಷ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ನಡೆದ 'ಕುವೆಂಪು ಜನ್ಮ ದಿನಾಚರಣೆ' ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಕೋರಿ ಬೆಂಗಳೂರಿನ 'ಪ್ರಜಾವಾಣಿ' ದಿನಪತ್ರಿಕೆಯ ಸಂಪಾದಕರಿಗೆ ಮನವಿ ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ಕೋಲಾರ ಜಿಲ್ಲೆಯ ಮುಳಬಾಗಿಲಿನ ಆದರ್ಶ ವಸತಿ ಶಾಲೆಯ ವಿದ್ಯಾರ್ಥಿ 'ಆನಂದ' ಎಂದು ಭಾವಿಸಿಕೊಂಡು, ನಿಮ್ಮ ಹುಟ್ಟು ಹಬ್ಬಕ್ಕೆ ಆಗಮಿಸುವಂತೆ ತಿಳಿಸಿ, ಮೈಸೂರು ಜಿಲ್ಲೆ ತಲಕಾಡು ನಿವಾಸಿಯಾದ ನಿಮ್ಮ ಗೆಳೆಯ ವೆಂಕಟೇಶ ಎಂಬುವವರಿಗೆ ಪತ್ರ ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧಬರೆಯಿರಿ. 1x5=5**

45. ಪ್ರಾಚ್ಯ ಸ್ಮಾರಕಗಳ ಸಂರಕ್ಷಣೆ.

**ಅಥವಾ**

ಭ್ರಷ್ಟಾಚಾರ ತಡೆಗಟ್ಟುವಲ್ಲಿ ಯುವಜನರ ಪಾತ್ರ.

*******

KM

# ಮಾದರಿ ಪ್ರಶ್ನೆಪತ್ರಿಕೆ – 5

ಸಮಯ: **3 ಗಂಟೆಗಳು** ವಿಷಯ : **ಪ್ರಥಮಭಾಷೆ ಕನ್ನಡ** ಗರಿಷ್ಠ ಅಂಕಗಳು: **100**

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. 6 x1 = 6**

1. ಅನುನಾಸಿಕ ಸಂಧಿಗೆ ಉದಾಹರಣೆಯಾಗಿರುವ ಪದವಿದು;
   (ಎ) ನಿಮ್ಮಡಿಗಳಲಿ (ಬಿ) ಆತ್ಮಾಭಿಮಾನ (ಸಿ) ಷಣ್ಮುಖ (ಡಿ) ನಮ್ಮೂರು
2. ಕಾರವಾರದಲ್ಲಿ ಉದ್ಯೋಗಿಯಾಗಿದ್ದ ವೀರೇಶ್ವರ ಪಾಠಕ್ ಮಲೇರಿಯಾದಿಂದ ಬಳಲಿದರು. – ಈ ವಾಕ್ಯವು;
   (ಎ) ಸಾಮಾನ್ಯವಾಕ್ಯ (ಬಿ) ಮಿಶ್ರವಾಕ್ಯ (ಸಿ) ಸಂಯೋಜಿತವಾಕ್ಯ (ಡಿ) ವಿಶೇಷವಾಕ್ಯ
3. 'ಬಡತನ' ಪದವು ವ್ಯಾಕರಣಾಂಶದ ಈ ಗುಂಪಿಗೆ ಸೇರಿದೆ;
   (ಎ) ತದ್ಧಿತಾಂತನಾಮ (ಬಿ) ತದ್ಧಿತಾಂತ ಭಾವನಾಮ (ಸಿ) ಕೃದಂತಾವ್ಯಯ (ಡಿ) ತದ್ಧಿತಾಂತಾವ್ಯಯ
4. ನಿಷೇಧ ಕೃದಂತಕ್ಕೆ ಉದಾಹರಣೆಯಾದ ಪದವಿದು;
   (ಎ) ಓಡದ (ಬಿ) ಓಡುವ (ಸಿ) ಓಡಿದ (ಡಿ) ಓಡುವುದು
5. 'ಮರದತ್ತಣಿಂ' ಪದದಲ್ಲಿರುವ ವಿಭಕ್ತಿಯ ಹೆಸರು;
   (ಎ) ಚತುರ್ಥೀ (ಬಿ) ಪಂಚಮೀ (ಸಿ) ಷಷ್ಠೀ (ಡಿ) ಸಪ್ತಮೀ
6. 'ಚಟಚಟ' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ;
   (ಎ) ಸಾಮಾನ್ಯಾವ್ಯಯ (ಬಿ) ಅನುಕರಣಾವ್ಯಯ (ಸಿ) ಭಾವಸೂಚಕಾವ್ಯಯ (ಡಿ) ಕ್ರಿಯಾರ್ಥಕಾವ್ಯಯ

**II. ಈ ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧಿ ಪದವನ್ನು ಬರೆಯಿರಿ. 4 x1 = 4**

7. ಚೌಕಾಷಿ : ಪರ್ಷಿಯನ್ : : ಚೊಂಬು : ....................
8. ಮೋಸಮಾಡು : ಕ್ರಿಯಾ ಸಮಾಸ : : ನಲ್ಗುದುರೆ : ....................
9. ಮೇದಿನಿ : ಭೂಮಿ : : ಆದಿತ್ಯ : ....................
10. ಮೇಲೆಕೆಳಗೆ : ಜೋಡುನುಡಿ : : ಮೊಟ್ಟಮೊದಲು: ....................

**III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 7 x1 = 7**

11. ಯುದ್ಧದ ಬಗೆಗೆ ಮುದುಕಿಯು ಏನೆಂದು ಗೊಣಗಿಕೊಂಡು ಬಾಗಿಲು ತೆರೆದಳು?
12. ವಿಶ್ವೇಶ್ವರಯ್ಯ ಅವರನ್ನು ಮೈಸೂರು ಸಂಸ್ಥಾನದ ದಿವಾನರನ್ನಾಗಿ ನೇಮಕ ಮಾಡಿದ ಮಹಾರಾಜರು ಯಾರು?
13. ಶಾನುಭೋಗರ 'ಬ್ರಹ್ಮಾಸ್ತ್ರ' ಯಾವುದು?
14. ಕವಿಗೆ ಹುಲ್ಲಿನ ಹಾಸು ಯಾವ ರೀತಿ ಕಂಡಿದೆ?
15. 'ಅಂತಕಾತ್ಮಜ' ಎಂದರೆ ಯಾರು?
16. ಮುನಿಸುತರು ಹೆದರಲು ಕಾರಣವೇನು?
17. ಯಾರಿಗೆ ವಸಂತಮುಖ ತೋರಲಿಲ್ಲ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 10 x2 = 20**

18. ಪೊಯಟ್ ಕಾರ್ನರ್‌ನಲ್ಲಿ ಯಾವ ಯಾವ ಕವಿಗಳ ಸಮಾಧಿಗಳಿವೆ?
19. ಅಶೋಕ ಪೈ ಅವರು ಹೇಳಿದ ಸಂಶೋಧನಾ ಸತ್ಯವೇನು?

20. ದುಷ್ಟಬುದ್ಧಿಯು ತನ್ನ ತಂದೆಗೆ ಏಕಾಂತದಲ್ಲಿ ಏನು ಹೇಳಿದನು?
21. ಅರಸ ವೃಷಭಾಂಕನು ಸುಕುಮಾರಸ್ವಾಮಿಗೆ ವ್ಯಾಧಿಯಿದೆ ಎಂದುಕೊಳ್ಳಲು ಕಾರಣವೇನು?
22. ಹಲಗಲಿಗೆ ದಂಡು ಬರಲು ಕಾರಣವೇನು?
23. ಕುದುರೆಯನ್ನು ಕಟ್ಟುವ ವಿಚಾರದಲ್ಲಿ ಮುನಿಸುತರಿಗೂ ಲವನಿಗೂ ನಡೆದ ಸಂವಾದವನ್ನು ಬರೆಯಿರಿ.
24. ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರ ಅಭಿಪ್ರಾಯವೇನು?
25. ಭಗತ್‌ಸಿಂಗ್ ತನ್ನ ಸಹೋದರಿಗೆ ಮಣ್ಣು ಯಾವುದರ ಸಂಕೇತ ಎಂದು ತೋರಿಸುತ್ತಾನೆ?
26. ದೇವತೆ ಕೊಟ್ಟ ಶಾಪವೇನು? ಶಾಪ ವಿಮೋಚನೆಯ ಫಲವೇನು?
27. 'ತಾವರೆ' ಎಂಬ ಉತ್ತರ ಬರಲು ಹೇಳಿದ ಒಗಟು ಯಾವುದು?

**V. ಕೆಳಗಿನ ಕವಿ/ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2x3=6**

28. ಪಂಪ
29. ಜಿ.ಎಸ್. ಶಿವರುದ್ರಪ್ಪ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1 x3 = 3**

30. ಏನು ಹೇಳೈ ಕರ್ಣ ಚಿತ್ತ
ಗ್ಲಾನಿ ಯಾವುದು ಮನಕೆ ಕುಂತೀ
ಸೂನುಗಳ ಬೆಸಕೈಸಿಕೊಂಬುದು ಸೇರದೇ ನಿನಗೆ ॥

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ. 1 x3 = 3**

31. ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ.

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ.1 x3 = 3**

32. ತಾಳಿದವನು ಬಾಳಿಯಾನು.

**ಅಥವಾ**

ಮನಸ್ಸಿದ್ದರೆ ಮಾರ್ಗ

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6x 3 = 18**

33. "ನನ್ನ ಮೊಮ್ಮಗುವಿನ ಹೆಣವಿದೆ ಅಲ್ಲಿ; ಅದನ್ನೂ ನೋಡಿ."
34. "ಮೈಸೂರು ಸಂಸ್ಥಾನಕ್ಕೆ 'ಮಾದರಿ ಮೈಸೂರು' ಎಂಬ ಕೀರ್ತಿ ಪ್ರಾಪ್ತವಾಯಿತು."
35. "ಮಂಗಳಲೋಕದ ಅಂಗಳಕೇರಿ"
36. "ಹಸುರಾದುದು ಕವಿಯಾತ್ಮಂ"
37. "ಈತನ ಮಾತು ಅಶ್ರುತಪೂರ್ವಂ"
38. "ನೆಲಕಿರಿವೆನೆಂದು ಬಗೆದಿರೆ ಛಲಕಿರಿವೆಂ"

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1x4 = 4**

39. ಕೊರಳ ಸೆರೆ ಹಿಗ್ಗಿದವು ದೃಗುಜಲ ............................................................ ಅಥವಾ ಮಾರಿಗೌತಣವಾಯ್ತು ನಾಳಿನ ಭಾರತವು ............................................................
............................................................ ............................................................
............................................................ ............................................................
............................................................ ............................................................
ನರುಹಿ ಕೊಂದನು ಹಲವು ಮಾತೇನೆಂದ ಚಿಂತಿಸಿದ ॥ ವೀರರೈವರ ನೋಯಿಸೆನು ರಾಜೀವಸಖನಾಣೆ ॥

**XI.** **ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ.** **1 x4 = 4**

40. ನಿಮಗೆ ಪೊಡೆಮಟ್ಟು ಪೋಪೀ
ಸಮಕಟ್ಟಿಂ ಬಂದೆನಹಿತರೊಳ್ ಸಂಧಿಯನೇಂ ।
ಸಮಕೊಳಿಸಲೆಂದು ಬಂದೆನೆ
ಸಮರದೊಳೆನಗಜ್ಜ ಪೇಟಿಮಾವುದು ಕಜ್ಜಂ ॥

**XII.** **ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2 x4 = 8**

41. ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ?

**ಅಥವಾ**

'ನಂಬಿ ಕೆಟ್ಟವರಿಲ್ಲ' ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ?

42. ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂಬುದು ಕವಿ ಶಿವರುದ್ರಪ್ಪನವರ ಆಶಯವಾಗಿದೆ? ವಿವರಿಸಿ.

**ಅಥವಾ**

ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯವೇನು? ವಿವರಿಸಿ.

**XIII.** **ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **1x4=4**

43. ವಿದುರನೀತಿಯುಲ್ಲಿ ವಿದುರನು ಧೃತರಾಷ್ಟ್ರನನ್ನು ಉದ್ದೇಶಿಸಿ ಇಹ–ಪರಗಳೆರಡಕ್ಕೂ ಕಲ್ಯಾಣವನ್ನು ಉಂಟುಮಾಡಬಲ್ಲ ಅನೇಕ ಸಂಗತಿಗಳ ಬಗ್ಗೆ ತಿಳಿಸಿಕೊಡುತ್ತಾನೆ. ಮಹಾಭಾರತದ ಉದ್ಯೋಗ ಪರ್ವದಲ್ಲಿರುವ ವಿದುರನೀತಿಯಲ್ಲಿ ವ್ಯವಹಾರ, ಮಾತು, ನೀತಿ, ಸದಾಚಾರ, ಧರ್ಮ, ಸುಖ–ದುಃಖಗಳು ಪ್ರಾಪ್ತವಾಗುವ ಬಗೆಯನ್ನು ತಿಳಿಸಲಾಗಿದೆ. ಅಲ್ಲದೆ ಕರ್ಮದ ನಿರ್ಣಯ, ತ್ಯಾಗದ ಮಹಿಮೆ, ನ್ಯಾಯದ ಸ್ವರೂಪ, ಸತ್ಯದ ಬಗ್ಗೆಯೂ ತಿಳಿಸಲಾಗಿದೆ. ಮುಂದುವರಿದು ಪರೋಪಕಾರ, ಕ್ಷಮೆ, ಅಹಿಂಸೆ, ಮಿತ್ರನ ಲಕ್ಷಣ, ಕೃತಘ್ನನಿಗೆ ಉಂಟಾಗುವ ದುರ್ದಸೆ ಮುಂತಾದವುಗಳ ಬಗ್ಗೆ ವರ್ಣನೆಯಿದೆ. ಈ ವರ್ಣನೆಯೊಂದಿಗೆ ರಾಜಧರ್ಮದ ಸುಂದರವಾದ ನಿರೂಪಣೆಯನ್ನು ಕೊಡಲಾಗಿದೆ. ವಿದುರನೀತಿಯ ಒಂದು ಶ್ಲೋಕದ ಅರ್ಥ ಹೀಗಿದೆ. "ಮುಪ್ಪು ರೂಪವನ್ನು, ಆಸೆಯು ಧೈರ್ಯವನ್ನು, ಮೃತ್ಯುವು ಪ್ರಾಣಗಳನ್ನು, ಅಸೂಯೆಯು ಧರ್ಮಾಚರಣೆಯನ್ನು, ಕಾಮವು ಲಜ್ಜೆಯನ್ನು, ನೀಚ ಮನುಷ್ಯರ ಸೇವೆಯು ಮನುಷ್ಯರ ಚಾರಿತ್ರ್ಯವನ್ನು, ಕೋಪವು ಸಂಪತ್ತನ್ನು ವಿನಾಶಗೊಳಿಸುತ್ತದೆ. ದುರಭಿಮಾನ ಅಥವಾ ದುರಹಂಕಾರವು ಮಾನವನ ಸರ್ವಸ್ವವನ್ನೂ ವಿನಾಶಗೊಳಿಸುತ್ತದೆ." ಶುದ್ಧ ಹಾಗೂ ಸುಖಮಯ ಜೀವನವನ್ನು ನಡೆಸಲು ಬಯಸುವ ವಿದ್ವಾಂಸ, ತರುಣ, ವೃದ್ಧ, ಬಾಲಕ, ಮಹಿಳೆ, ಶಾಸಕ, ಪ್ರಜೆ, ಧನಿಕ, ದರಿದ್ರ, ವಿದ್ಯಾರ್ಥಿ, ಶಿಕ್ಷಕ, ಸೇವಾವೃತ್ತಿ ಎಲ್ಲರಿಗೂ ವಿದುರನೀತಿಯ ಶ್ಲೋಕಗಳು ಅತ್ಯಂತ ಪ್ರಯೋಜನಕಾರಿಯಾಗಿವೆ.

**ಪ್ರಶ್ನೆಗಳು :**

ಅ) ವಿದುರನೀತಿಯಲ್ಲಿ ಯಾವ ಯಾವ ವಿಷಯಗಳ ಬಗ್ಗೆ ನಿರೂಪಿಸಲಾಗಿದೆ?

ಬ) ವಿದುರನೀತಿಯ ಶ್ಲೋಕದಲ್ಲಿ ತಿಳಿಸಿರುವಂತೆ ವಿನಾಶಕ್ಕೆ ಕಾರಣವಾಗುವ ಅಂಶಗಳಾವುವು?

**XIV.** **ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.** **1 x5 = 5**

44. ನಿಮ್ಮನ್ನು ಹಾಸನ ಜಿಲ್ಲೆಯ ಹೊಳೇನರಸೀಪುರದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ವಿಜಯೇಂದ್ರ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ನಡೆದ ವಾರ್ಷಿಕೋತ್ಸವ ಸಮಾರಂಭದ ವರದಿಯನ್ನು ಪ್ರಕಟಿಸುವಂತೆ ಕೋರಿ ಬೆಂಗಳೂರಿನ 'ವಿಶ್ವವಾಣಿ' ದಿನಪತ್ರಿಕೆಯ ಸಂಪಾದಕರಿಗೆ ಮನವಿ ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ಮೈಸೂರು ಜಿಲ್ಲೆಯ ಕೇರ್ಗಳ್ಳಿಯ ಕಿತ್ತೂರು ಚೆನ್ನಮ್ಮವಸತಿ ಶಾಲೆಯ ವಿದ್ಯಾರ್ಥಿ 'ಸಹನಾ' ಎಂದುಭಾವಿಸಿಕೊಂಡು, ನಿಮ್ಮೂರಿನಲ್ಲಿ ನಡೆಯುವ ಜಾತ್ರೆಗೆ ಆಗಮಿಸುವಂತೆ ತಿಳಿಸಿ, ಚಿಕ್ಕಮಗಳೂರು ಜಿಲ್ಲೆ ಆಲ್ದೂರು ನಿವಾಸಿಯಾದ ನಿಮ್ಮ ಗೆಳತಿ 'ನಾಗಮ್ಮ' ಎಂಬುವವರಿಗೆ ಪತ್ರ ಬರೆಯಿರಿ.

**XV.** **ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.** **1x5=5**

45. ರಾಷ್ಟ್ರೀಯ ಹಬ್ಬಗಳ ಮಹತ್ವ **ಅಥವಾ** ತ್ಯಾಜ್ಯವಸ್ತು ನಿರ್ವಹಣೆ

# ಮಾದರಿ ಪ್ರಶ್ನೆಪತ್ರಿಕೆ – 6

ಸಮಯ: **3 ಗಂಟೆಗಳು** ವಿಷಯ : **ಪ್ರಥಮಭಾಷೆ ಕನ್ನಡ** ಗರಿಷ್ಠ ಅಂಕಗಳು: **100**

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. 6 x1 = 6**

1. ಆದೇಶ ಸಂಧಿಗೆ ಉದಾಹರಣೆಯಾಗಿರುವ ಪದವಿದು;
   (ಎ) ತಕ್ಕನಿತು (ಬಿ) ವಾಗ್ದೇವಿ (ಸಿ) ಕಳ್ಗುಡಿ (ಡಿ) ದಿಗಂತ
2. ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ಈ ಚಿಹ್ನೆಯನ್ನು ಬಳಸಲಾಗುವುದು;
   (ಎ) ಪೂರ್ಣವಿರಾಮ (ಬಿ) ಅಲ್ಪವಿರಾಮ (ಸಿ) ಅರ್ಧವಿರಾಮ (ಡಿ) ಭಾವಸೂಚಕ
3. ಆತ್ಮಾರ್ಥಕ ಸರ್ವನಾಮಕ್ಕೆ ಉದಾಹರಣೆಯಾದ ಪದವಿದು;
   (ಎ) ಅವನು (ಬಿ) ತಾನು (ಸಿ) ನಾನು (ಡಿ) ನೀನು
4. ‘ ನಂಬಿಕೆ’ ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ;
   (ಎ) ಕೃದಂತನಾಮ (ಬಿ) ಕೃದಂತಾವ್ಯಯ (ಸಿ) ಕೃದಂತ ಭಾವನಾಮ (ಡಿ) ತದ್ಧಿತಾಂತಾವ್ಯಯ
5. ‘ದಿನಪಸುತನಂ’ ಪದದಲ್ಲಿರುವ ವಿಭಕ್ತಿಯ ಹೆಸರು;
   (ಎ) ಪ್ರಥಮಾ (ಬಿ) ದ್ವಿತೀಯಾ (ಸಿ) ತೃತೀಯಾ (ಡಿ) ಪಂಚಮೀ
6. ‘ವಿದ್ಯಾಧರ’ ಪದದ ತದ್ಭವ ರೂಪವಿದು;
   (ಎ) ವಿದ್ಯಾವಂತ (ಬಿ) ವಿದ್ವಾಂಸ (ಸಿ) ಬಿಜ್ಜೆದರ (ಡಿ) ಬಿಜ್ಜೋದರ

**II. ಈ ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ. 4 x1 = 4**

7. ದೀನಾರ : ಗ್ರೀಕ್ : : ದಿವಾನ : ......................
8. ನಟ್ಟಡವಿ : ಅಂಶಿ ಸಮಾಸ : : ನಾಣಿಲಿ : ......................
9. ಭೂಮಿಜಾತೆ : ಸೀತೆ : : ಸೌಮಿತ್ರಿ : ......................
10. ತುತ್ತತುದಿ : ದ್ವಿರುಕ್ತಿ : : ಹಾಲುಮೊಸರು: ......................

**III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 7 x1 = 7**

11. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?
